ಯಾರು ಎಷ್ಟು ದಿನ ಎಂದು ಇನ್ನೊಬ್ಬರ ಕಷ್ಟಕ್ಕೆ ಮರುಗುತ್ತಾರೆ? ಹೆಗಲು ಕೊಡುತ್ತಾರೆ? ಗಂಡ ಹೇಳಿದ್ದೇ ಸಾಕು ಎನ್ನುವಂತೆ ಹೊಕ್ಕುಬಳಕೆಯನ್ನು ಮಿತಿಗೊಳಿಸಿದಳೇ ನಳಿನಾಕ್ಷಿ? ಅವಳಿಗೂ ಸಾಕು... ಅನ್ನಿಸತೊಡಗಿತ್ತಾ? ಒಂದೊಂದೂವರೆ ವರ್ಷ ಕಳೆದರೂ ಇನ್ನೂ ಅಳುತ್ತಿರು, ಇನ್ನೂ ಗೋಳಾಡುತ್ತಿರು ಅಂದರೆ ಕೇಳುವವರಿಗೆ ಕಿರಿಕಿರಿಯಾದರೆ ಏನಾಶ್ಚರ್ಯ? ವೇದಮ್ಮ ಚೀಲ ಹಿಡಿದು ಹತ್ತಿರದ ದಿನಸಿ ಅಂಗಡಿಗೆ ಓಡಾಡುವುದು, ಮನೆಯೆದುರು ತರಕಾರಿ ಕೊಳ್ಳುವುದು ನೋಡತೊಡಗಿದ ಮೇಲೆ ಗಂಡ ಹೇಳಿದ್ದು ಅಕ್ಷರಶಃ ಸರಿ ಅಂದುಕೊಂಡಳು ನಳಿನಾಕ್ಷಿ. 'ತಲೆಗೆ ತಾಕಿದರೆ ಬುದ್ಧಿ ಬರುತ್ತದೆ' ಎನ್ನುವುದು ಈ ಸಂದರ್ಭಕ್ಕೆ ಹೊಂದಿಕೆಯಾಗುತ್ತದೋ, ಬಿಡುತ್ತದೋ ಅಂತೂ ನೆನಪಾಗಿತ್ತು. ಹೀಗೆ ನೆರೆಮನೆಯ ಹಾದಿಯ ಸಂಚಾರ ವಿರಳವಾಗಿ, ಹೊರಗೆ ಕಾಣಿಸಿದಾಗೊಮ್ಮೆ, ಲೋಕಾರೂಢಿಯ ಕುಶಲೋಪರಿಗೆ ಸೀಮಿತವಾಗಿ, ವಾರಕ್ಕೋ, ಹದಿನೈದು ದಿನಕ್ಕೋ ಅವರ ಮನೆಗೆ ಹೋದರೆ,

'ನನ್ನ ಕರ್ಕರೆ ಕೇಳಿ ಕೇಳಿ ನಿಂಗೆ ಬೇಜಾರಾಗಿರ್ಬೇಕು ಅಲ್ವಾ? ಬರೋದು ಅಪರೂಪ ಆಯ್ತು' ಒಮ್ಮೆ ನೇರವಾಗಿ ಕೇಳಿದ್ದರು ವೇದಮ್ಮ. ಕಳ್ಳನ ಮನಸ್ಸು ಹುಳ್ಳಹುಳ್ಳಗಾಗಿತ್ತು.

'ಥೋ, ಹಾಗೇನಿಲ್ಲ ಆಂಟಿ. ಮಕ್ಕಳಿಗೆ ಪರೀಕ್ಷೆ ಹತ್ರ ಬಂತಲ್ವಾ? ಕೂರಿಸಿ ಓದಿಸದಿದ್ರೆ ಚೇಷ್ಟೇಲೇ ಕಾಲ ಕಳೀತಾವೆ' ಸಮಜಾಯಿಷಿ ಹೇಳಿದ್ದಳು ನಳಿನಾಕ್ಷಿ.

'ಹೌದು ಕಣೇ. ಸಂಸಾರ ನಿಭಾಯಿಸೋದು ಅಂದ್ರೆ ಸುಲಭಾನಾ? ಎಲ್ಲಕ್ಕೂ ತಲೆ ಕೊಡ್ಬೇಕು...'

'...'

'ಕೊನೆಗೆ ಉಳಿಯೋದೇನು? ಏನೂ ಇಲ್ಲ. ನಮ್ಮ ತಲೆಗೆ ನಮ್ಮದೇ ಕೈ. ಒದ್ದಾಡಿದ್ದಷ್ಟೇ ಲಾಭ'.

ಅವರು ಮಾತಾಡುತ್ತಿರುವಾಗ ಸೂಕ್ಷ್ಮವಾಗಿ ಮನೆಯನ್ನು ಗಮನಿಸಿದ್ದಳು ನಳಿನಾಕ್ಷಿ. ಅಚ್ಚುಕಟ್ಟಿಗೆ ಮತ್ತೊಂದು ಹೆಸರು ಅನ್ನುವಂತಿದ್ದ ಮನೆಗೆ ಗ್ರಹಣ ಹಿಡಿದಂತಾಗಿತ್ತು. ಕಿಟಕಿ, ಬಾಗಿಲುಗಳ ಮೇಲೆ ದೂಳು ಮುಸುಕಿದೆ. ಸೋಫಾದ ಮೇಲೆ ಹಾಸಿದ್ದ ಕವರು ನೀರು ಕಾಣದೆ ಬಣ್ಣಗೆಟ್ಟಿದೆ. ಅಗೋ, ಮೂಲೆಯಲ್ಲಿ ನೇತಾಡುತ್ತಿದೆ ಜೇಡರಬಲೆ. ಒಂದು ಹಿಡಿಕುಂಟೆ ಕೈಗೆತ್ತಿಕೊಂಡು ಒಮ್ಮೆ ಝಾಡಿಸಿದರೆ ನಿವಾರಿಸಿಕೊಳ್ಳುವುದು ಎಷ್ಟು ಸುಲಭ. ಮನೆ ಯಜಮಾನ ಬದುಕಿದ್ದಾಗ ಯಾವತ್ತಾದರೂ ಹೀಗಿತ್ತಾ ಈ ಮನೆ? ಲಕಲಕ ಎಂದು ಶೋಕೇಸಿನಂತೆ ಕಂಗೊಳಿಸುತ್ತಾ, 'ದಿನಾ ಒಂದೊಂದು ರೂಮು ಕ್ಲೀನ್ ಮಾಡೋ ಅಭ್ಯಾಸ ಮಾಡ್ಕೋ. ಕಷ್ಟಾನೂ ಆಗಲ್ಲ, ಮನೇನೂ ಚೊಕ್ಕವಾಗಿರುತ್ತೆ. ಒಂದು ಸುತ್ತು ಮುಗಿದು ಮತ್ತೆ ಹಳೇದಕ್ಕೆ ಬಂದರೆ ಸೈಯಪ್ಪಾ...' ಇದೇ ವೇದಮ್ಮ ಬೋಧಿಸಿದ್ದಲ್ಲವಾ?

'ಆಂಟಿ ಪೊರಕೆ ಕೊಡಿ' ಎಂದು ಕೇಳಬೇಕೆಂದು ತುದಿನಾಲಿಗೆಯವರೆಗೆ ಬಂದ ಮಾತು ತುಟಿ ಮೀರಿ ಹೊರಗೆ ಬರಲಿಲ್ಲ. ಬರುತ್ತಾಳೆ ಕೆಲಸದವಳು. ಹೊರಗೆ ರಂಗೋಲಿ ಹಾಕುವ ಕೆಲಸವೂ ಅವಳ ಗಡಿಬಿಡಿಯಲ್ಲಿ ಚಿಟಿಕೆ ಹಾಕುವಷ್ಟರಲ್ಲಿ



ಮುಗಿದು ಹೋಗುತ್ತದೆ. ಆಂಟಿ ಕೈಯಾರೆ ಕೆಲಸ ಮಾಡುವುದು ಬೇಡ, ಹೇಳಿ ಮಾಡಿಸುವುದಕ್ಕೂ ಸೋಮಾರಿತನವೇ? 'ಬಿದ್ದಿರುತ್ತೆ' ಎನ್ನುವ ಅವಗಣನೆಯೇ? ಹಿಂಜಿದ ಹತ್ತಿಯಂತಾದ ತಲೆಗೂದಲಿನ ವೇದಮ್ಮನನ್ನು ನೋಡುತ್ತಿದ್ದರೆ ಹೊಟ್ಟೆಯೊಳಗೆ ಹೊರಳಾಡುತ್ತದೆ ಸಂಕಟ. ಹೇಗಿದ್ದವರು ಹೇಗಾಗುತ್ತಾರೆ ಎನ್ನುವುದು ಯಾರಿಗೆ ಗೊತ್ತಿರುತ್ತದೆ? ಬದುಕು ಅನ್ನುವುದೇ ಗಣನೆಗೆ ದಕ್ಕದ ನಿಗೂಢ. ಹೇಳಿದ್ದಳು ನಳಿನಾಕ್ಷಿ,

'ನಿಮ್ಮ ಕೆಲಸದೋಳಿಗೆ ಕಿವಿ ತಿರುಪಿ ಬುದ್ಧಿ ಹೇಳಿ ಆಂಟಿ. ಬಲೆ ಗಿಲೆ ಗುಡಿಸೋಕೆ ಏನು ಧಾಡಿ? ದುಡ್ಡು ಬಿಸಾಕಲ್ವಾ?'

ಮಾತಾಡಿರಲಿಲ್ಲ ವೇದಮ್ಮ. ದೂಳು ವರೆಸಿಕೊಂಡು ಹೊಳೆಯುತ್ತಿದ್ದುದು ಒಂದೇ, ವೇದಮ್ಮನ ಯಜಮಾನರ ಫೋಟೊ. ದಿವಸಾ ಹಾಕುತ್ತಿದ್ದ ಹೂಹಾರ ಒಣಗಿ ನಿಂತು ದಾರ ಕಾಣುತ್ತಿದೆ. ಅಂಗಳದ ಗಿಡಗಳಿಗೆ ನೀರು ಹಾಕಿದರೆ ತಾನೇ ಹೂವು ಅರಳುವುದು? ಒಣಗುತ್ತಿವೆ ಹೂಗಿಡಗಳೂ, ಥೇಟ್ ವೇದಮ್ಮನ ಇರಸರಿಕೆಯ ಹಾಗೆ.

***

ಹನ್ನೊಂದರ ಹೊತ್ತಿಗೆ ಡಬಡಬ ಬಾಗಿಲು ಬಡಿಯುವ ಸದ್ದು. ನೆರೆಮನೆಯ ಕೆಲಸದಾಕೆ ಗಾಬರಿಯಿಂದ ಓಡಿ ಬಂದಿದ್ದಳು, ವೇದಮ್ಮ ಕೈಯಾರೆ ಜೀವ ತೆಗೆದುಕೊಂಡಿರುವ ಸುದ್ದಿ ತಲುಪಿಸಲು. ಮುಂಬಾಗಿಲು ನೆಪಕ್ಕೆ ಸರಿದಿಟ್ಟು, ತಮ್ಮ ಸಾವಿಗೆ ತಾವೇ ಕಾರಣ ಎನ್ನುವ ಚೀಟಿ ಬರೆದಿಟ್ಟು, ವೇದಮ್ಮ ನೇಣು ಬಿಗಿದುಕೊಂಡಿದ್ದರು. ಥಕ್ಕನೆ ಕೆಲಹೊತ್ತಿನ ಹಿಂದೆ ಅಂದುಕೊಂಡಿದ್ದು ನೆನಪಾಗಿತ್ತು ನಳಿನಾಕ್ಷಿಗೆ. ಅಲ್ಲೊಂದು ಅಸಹಜ ಮೌನ ಮಡುಗಟ್ಟಿದೆ ಅನ್ನುವ ಅನಿಸಿಕೆ. ಗಂಡನ ಆಫೀಸಿಗೆ ಫೋನು. ತಡ ಮಾಡದೆ ಅವನು ಬಂದು, ಅಷ್ಟು ಹೊತ್ತಿಗೆ ಸುತ್ತಮುತ್ತಲಿನವರೆಲ್ಲಾ ಜಮಾಯಿಸಿ, ಪೊಲೀಸ್ ಸ್ಟೇಷನ್ನಿಗೆ ಸುದ್ದಿ ತಲುಪಿಸಿ, ವೇದಮ್ಮನ ಮಗಳಿಗೆ ಫೋನ್ ಮಾಡುವಾಗ ನಳಿನಾಕ್ಷಿಯ ಕೈ ಕಂಪಿಸುತ್ತಿತ್ತು. ಮುಖದಲ್ಲಿ ಬಸಿಯುತ್ತಿತ್ತು ಬೆವರು.

***

ಪಾಪಪ್ರಜ್ಞೆ ಏನಾದರೂ ಕಾಡುತ್ತಿದೆಯೇ ನಳಿನಾಕ್ಷಿಗೆ? ವೇದಮ್ಮನನ್ನು ವಿಚಾರಿಸಿಕೊಳ್ಳುವುದರಲ್ಲಿ, ಒಂದಿಷ್ಟು ಹೊತ್ತು ಅವರ ದುಗುಡ ದುಮ್ಮಾನಗಳಿಗೆ ಕಿವಿಯಾಗುವುದರಲ್ಲಿ, ಸಂತೈಕೆಯ ಎರಡು ಮಾತಾಡುವುದರಲ್ಲಿ ತಾನು ಕ್ರಮೇಣ ನಿರ್ಲಕ್ಷ್ಯ ತೋರಿಸತೊಡಗಿದೆ ಎಂದು ಅವಳಿಗೆ ಬಲವಾಗಿ ಅನಿಸತೊಡಗಿದೆ. ಹಾಗೆ ವಿಚಾರಿಸಿಕೊಳ್ಳಲೇಬೇಕಾದ್ದು ಅವಳ ಕರ್ತವ್ಯವೇನಲ್ಲದಿದ್ದರೂ ಇಷ್ಟು ವರ್ಷಗಳಿಂದ ಒಡನಾಡಿದವರೊಂದಿಗೆ ಒಂದು ನಂಟು ಬೆಸೆದುಕೊಂಡಿದ್ದುದು ಸುಳ್ಳೇ? ಸಾಮಾಜಿಕ ಜವಾಬ್ದಾರಿ ಅನ್ನುವುದೊಂದು ಇರುವುದಿಲ್ಲವೇ? ಅಪರಿಚಿತರೊಂದಿಗೆ ಬೇಡ, ಕೊನೇ ಪಕ್ಷ ಪರಿಚಿತರೊಂದಿಗಾದರೂ? ಹಾಗಿಲ್ಲದಿದ್ದರೆ ಮನುಷ್ಯರಾಗಿ ಹುಟ್ಟಿ ಏನು ಪ್ರಯೋಜನ? ವೇದಮ್ಮನಿಗೋಸ್ಕರ ಬೇರೇನೂ ಮಾಡಬೇಕಾದ್ದಿರಲಿಲ್ಲ, ದಿನಕ್ಕೆ ಐದು ನಿಮಿಷದ ಸಮಯ ಕೊಟ್ಟಿದ್ದರೂ ಸಾಕಾಗುತ್ತಿತ್ತು ಎನ್ನುವುದು ತಡವಾಗಿ ಅರಿವಿಗೆ ಬರುತ್ತಿದೆ.

ನಿಧಾನವಾಗಿ ವೇದಮ್ಮ ಖಿನ್ನತೆಗೆ ಜಾರುತ್ತಿದ್ದರೆಂಬುದು ಮೇಲ್ನೋಟಕ್ಕೆ ಗೊತ್ತಾಗುವಂತಿದ್ದರೂ ಯಾಕೆ ದಿವ್ಯ ನಿರ್ಲಕ್ಷ್ಯ ತೋರಿಸಿದ್ದು? ಕೊನೇಪಕ್ಷ ಅವರ ಮಗಳ ಕಿವಿಗಾದರೂ ಹಾಕಬಹುದಿತ್ತು ಎಂದು ಈಗ ಅಂದುಕೊಂಡರೆ ಯಾವ ಪ್ರಯೋಜನ? ಎಲ್ಲೋ ಓದಿದ್ದಾಳೆ ಅಥವಾ ಕೇಳಿದ್ದಾಳೆ ನಳಿನಾಕ್ಷಿ. ಅದೊಂದು ಕ್ಷಣ ಇರುತ್ತದೆಯಂತೆ. 'ಇನ್ನು ಬದುಕು ಸಾಕು' ಎನ್ನುವ ಹತಾಶೆ ತುತ್ತತುದಿ ಬಿಂದುವಿಗೆ ತಲುಪಿದ ಕ್ಷಣ. ಸಾಯುವ ನಿರ್ಧಾರ ಗಟ್ಟಿಗೊಳ್ಳುವ ಕ್ಷಣ. ಆ ಕ್ಷಣದ ನಿರ್ಧಾರಕ್ಕೆ ಅಡ್ಡಿಯಾದರೆ ಮತ್ತೆ ಅದು ಹಿನ್ನೆಲೆಗೆ ಸರಿಯಬಹುದಾದ ಸಾಧ್ಯತೆ ಇರುತ್ತದೆಯಂತೆ. ಖಿನ್ನತೆಯಿಂದ ಬಳಲುವವರಿಗೂ ಈ ಮಾತು ಅನ್ವಯಿಸುವುದೇ? ಆ ಸುವರ್ಣ ಕ್ಷಣವನ್ನು ತಾನು ಬಳಸಿಕೊಂಡು ಒಂದು ಜೀವವನ್ನು ಕಾಪಾಡಿಕೊಳ್ಳಬಹುದಿತ್ತೇ? ಪ್ರೀತಿಯ ಒಂದು ಸ್ಪರ್ಶ, ಸಾಂತ್ವನದ ಎರಡು ಮಾತು, 'ನಿಮ್ಮೊಡನೆ ನಾವಿದ್ದೇವೆ, ನೀವು ನಮಗೆ ಬೇಕು' ಅನ್ನುವ ನಂಬುಗೆ ಕೊಡಮಾಡುವ ಸಮಾಧಾನಕ್ಕೆ ಜಿಪುಣತೆ ತೋರಿಸುವ ಮನುಷ್ಯಮಾತ್ರರ ಧೋರಣೆಗೆ ತಾನು ಅಪವಾದವಾಗಲು ಹೇಗೆ ಸಾಧ್ಯ ಎನ್ನುವ ಪಾಪಪ್ರಜ್ಞೆ ಸದ್ಯಕ್ಕಂತೂ ನಳಿನಾಕ್ಷಿಯನ್ನು ಬೆಂಬಿಡದೆ ಚುಚ್ಚುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in